DECEMBER 25, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಯೇಸು ಕ್ರಿಸ್ತರ ಜನ್ಮ ದಿನವಾದ ಇಂದು, ಕ್ರಿಸ್ಮಸ್ ಹಬ್ಬವನ್ನು, ನಾಡಿನಾದ್ಯಂತ ಕ್ರೈಸ್ತ ಬಾಂಧವರು, ಸಂಭ್ರಮ, ಸಡಗರದಿಂದ ಆಚರಿಸುತ್ತಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ನಾಡಿನ ಜನತೆಗೆ, ಕ್ರಿಸ್ಮಸ್ ಹಬ್ಬದ ಶುಭಾಶಯ ಕೋರಿದ್ದಾರೆ. ಕ್ರಿಸ್ಮಸ್, ಪ್ರೀತಿ, ಶಾಂತಿ ಮತ್ತು ಭರವಸೆ ತುಂಬಲಿ. ಕ್ರಿಸ್ತನ ಶಾಂತಿ ಸಂದೇಶ, ನಮ್ಮೆಲ್ಲರನ್ನೂ ಇನ್ನ ್ಟ ಮಾನವೀಯತೆಯಿಂದ ನಡೆದುಕೊಳ್ಳಲು ಪ್ರೇರೇಪಿಸಲಿ ಎಂದು, ಅವರು ಆಶಿಸಿದ್ದಾರೆ.

<><><>

ಭಾರತರತ್ನ, ಅಟಲ ಬಿಹಾರಿ ವಾಜಪೇಯಿ ಅವರ 101ನೇ ಜನ್ಮದಿನವಿಂದು. ದೇಶಾದ್ಯಂತ ಮುತ್ಸದ್ದಿ ಹಾಗೂ ಕವಿ ವಾಜಪೇಯಿ ಅವರಿಗೆ, ಹಲವು ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ, ಶ್ರದ್ಧಾ ಸುಮನ ಅರ್ಪಿಸಲಾಗುತ್ತಿದೆ. ತನ್ನಿಮಿತ್ತ ಇಂದು, ಸುಶಾಸನ ದಿವಸ್ ಆಚರಿಸಲಾಗುತ್ತಿದೆ.

<><><>

ಅಣು ಶಕ್ತಿಯಿಂದ ಮೂಲ ಸೌಕರ್ಯದ ವರೆಗೆ, ಶಿಕ್ಷಣದಿಂದ ಸಂಪರ್ಕ ಕ್ರಾಂತಿಯ ವರೆಗೆ, ಭಾರತದ ದಿಕ್ಕು ಬದಲಿಸಿದ, ದೂರದೃಷ್ಟಿಯ ನಾಯಕ ಅಟಲ್ ಬಿಹಾರಿ ವಾಜಪೇಯಿ, ಎಂದು ರಾಜ್ಯ ಬಿಜೆಪಿ, ಎಕ್ಸ್ ಮಾಧ್ಯಮದಲ್ಲಿ ಸ್ಮರಿಸಿದೆ.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಸೇರಿದಂತೆ, ಅನೇಕ ಗಣ್ಯರು, 'ಸದೈವ ಅಟಲ್' ಸ್ಮೃತಿಗೆ, ಗೌರವ ಅರ್ಪಿಸಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 36 ಸೆಕೆಂದುಗಳು

<><><>

ಬೆಂಗಳೂರಿನಿಂದ ಉತ್ತರಕನ್ನಡ ಜಿಲ್ಲೆಯ, ಗೋಕರ್ಣಕ್ಕೆ ತೆರಳುತ್ತಿದ್ದ ಖಾಸಗಿ ಬಸ್, ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲೂಕಿನ, ಜವಗೊಂಡನಹಳ್ಳಿ ಗ್ರಾಮದ ಸಮೀಪ, ರಾಷ್ಟ್ರೀಯ ಹೆದ್ದಾರಿ 48ರಲ್ಲಿ, ಮಧ್ಯರಾತ್ರಿ ಅಪಘಾತಕ್ಕೀಡಾಗಿದೆ.

<><><>

ಪೂರ್ವ ವಲಯದ ಐ.ಜಿ.ಪಿ. ಬಿ.ಆರ್. ರವಿಕಾಂತೇಗೌಡ ಮಾಹಿತಿ ನೀಡಿ, ಸುಟ್ಟು ಕರಕಲಾದ, 9 ಶವಗಳನ್ನು ಈ ವರೆಗೆ ಹೊರತೆಗೆಯಲಾಗಿದೆ. ಗಾಯಗೊಂಡ, 9 ಜನರನ್ನು ಹೆಚ್ಚಿನ ಚಿಕಿತ್ಸೆಗಾಗಿ, ಬೆಂಗಳೂರಿಗೆ ಕರೆದೊಯ್ಯಲಾಗಿದೆ. ಮೂವರಿಗೆ ತುಮಕೂರು ಜಿಲ್ಲೆ, ಹಿರಿಯೂರು ಮತ್ತು ಶಿರಾ ಆಸ್ಪತ್ರೆಗಳ, ತುರ್ತು ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಒಟ್ಟು 29 ಜನ ಪ್ರಯಾಣಿಕರು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು ಎಂದು, ತಿಳಿಸಿದ್ದಾರೆ.

<><><>

ಸಾರಿಗೆ ಖಾತೆ ಸಚಿವ ರಾಮಲಿಂಗಾರೆಡ್ಡಿ, ಗೃಹ ಖಾತೆ ಸಚಿವ ಜಿ.ಪರಮೇಶ್ವರ ಕಂಬನಿ ಮಿಡಿದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಘಟನೆಯ ಮಾಹಿತಿ ಪಡೆದಿದ್ದಾರೆ.

<><><>

ಡಿಜಿಟಲ್ ಯುಗದಲ್ಲಿ, 'ಡಿಜಿಟಲ್ ಡಿಟಾಕ್ಸ್'ಗೆ, ಬೆಳಗಾವಿ ಜಿಲ್ಲೆ, ಹಲಗಾ ಗ್ರಾಮ ಪಂಚಾಯಿತಿ ಮಾದರಿ ಹೆಜ್ಜೆ ಇಟ್ಟಿದೆ. ತಂತ್ರಜ್ಞಾನದ ಲಾಭಗಳನ್ನು ಸದುಪಯೋಗಪಡಿಸಿಕೊಳ್ಳುವಾಗ, ನಮ್ಮ ಸಾಮಾಜಿಕ ಜವಾಬ್ದಾರಿಗಳನ್ನು ಕೂಡ ಮರೆಯಬಾರದು ಎಂಬ, ಹಲಗಾ ಗ್ರಾಮ ಪಂಚಾಯಿತಿಯ ಉದ್ದೇಶ ಶ್ಲಾಘನೀಯ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ತಿಳಿಸಿದ್ದಾರೆ. ಗ್ರಾಮ ಪಂಚಾಯಿತಿಯಲ್ಲಿ ಪ್ರತಿ ದಿನ ಸಂಜೆ 7 ಗಂಟೆಗೆ ಸೈರನ್ ಮೊಳಗಿಸಲಾಗುತ್ತಿದೆ. ನಂತರ ಮಕ್ಕಳಿಗೆ ಪಠ್ಯ ಪುಸ್ತಕ ಅಭ್ಯಾಸ ಕಡ್ಡಾಯ. ಪೋ ‘ಕರೂ ಟೆಲಿವಿ ’ನ್ ಬಂದ್ ಮಾಡಿ ಮಕ್ಕಳ ಓದು ಅಥವಾ ಸಾಮಾಜಿಕ ಅಥವಾ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಜೊತೆಗೂಡುತ್ತಾರೆ.

<><><>

ಕರ್ನಾಟಕವ ್ಟೇ ಅಲ್ಲ, ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಅನನ್ಯತೆಯ ಹೆಗ್ಗುರುತಾಗಿರುವ, ಮೈಸೂರು ನಗರದ, ಕೇಂದ್ರೀಯ ಸಂಪರ್ಕ ಬ್ಯೂರೋ – CBC ಕಚೇರಿಯನ್ನು ಸ್ಥಗಿತಗೊಳಿಸದಂತೆ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ, ಅಶ್ವಿನಿ ವೈಷ್ಣವ್ ಅವರಿಗೆ, ಪತ್ರ ಬರೆದು ವಿನಂತಿಸಿದ್ದಾಗಿ, ತಿಳಿಸಿದ್ದಾರೆ.

<><><>

ಪಾರದರ್ಶಕ ಆಡಳಿತವೇ, ತಮ್ಮ ಸರ್ಕಾರದ ಗುರಿಯಾಗಿದ್ದು, ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ತಹಸೀಲ್ದಾರ್ ಕಚೇರಿಗೆ ಅನಿರೀಕ್ಷಿತ ಭೇಟಿ ನೀಡಿ, ಕಚೇರಿಯ ಕಾರ್ಯವೈಖರಿ ಪರಿಶೀಲಿಸಿದ್ದಾಗಿ, ಕೃಷಿ ಮಾರುಕಟ್ಟೆ ಖಾತೆ ಸಚಿವ, ಶಿವಾನಂದ ಪಾಟೀಲ ತಿಳಿಸಿದ್ದಾರೆ.

<><><>

ಬೆಳಗಾವಿ ಉದ್ಯಮಬಾಗ ಕೈಗಾರಿಕಾ ಕ್ಷೇತ್ರದ ಹತ್ತಿರ Employees State Insurance Corporation (ESIC) ಉಪ – ವಿಭಾಗೀಯ ಕಚೇರಿ, ಶಾಖಾ ಕಚೇರಿ ಮತ್ತು ಆಸತ್ರೆಯನ್ನು ಸ್ಥಾಪಿಸುವ ಬಗ್ಗೆ, ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ಸಚಿವರಾದ ಮನ್ಸುಖ್ ಮಾಂಡವೀಯ ಹಾಗೂ ರಾಜ್ಯ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ ಅವರಿಗೆ, ಪತ್ರದ ಮೂಲಕ, ಮನವಿ ಮಾಡಿದ್ದಾಗಿ, ಬೆಳಗಾವಿ ಸಂಸದ ಜಗದೀಶ ಶೆಟ್ಟರ್ ತಿಳಿಸಿದ್ದಾರೆ. ನೂತನ ಕೈಗಾರಿಕಾ ನೀತಿ ಜಾರಿಯಿಂದ, ಜಿಲ್ಲೆಯಡಿ ಬರುವ ಅಥಣಿ, ರಾಯಬಾಗ, ನಿಪ್ಪಾಣಿ, ಸವದತ್ತಿ, ಬೈಲಹೊಂಗಲ ಮತ್ತು ರಾಮದುರ್ಗ ತಾಲೂಕುಗಳು, ಇ.ಎಸ್.ಐ. ವ್ಯಾಪ್ತಿಗೆ ಸೇರಿವೆ. ಕೈಗಾರಿಕಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆಯಲ್ಲಿ, ಗಣನೀಯ ಏರಿಕೆ ಕಂಡುಬಂದಿದೆ, ಎಂದರು.

<><><>

ನಿಧನ ವಾರ್ತೆ

<><><>

ಖ್ಯಾತ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯಕ, ಪಂಡಿತ ಅಶೋಕ ಹುಗ್ಗಣ್ಣವರ ದಾವಣಗೆರೆಯಲ್ಲಿ ಇಂದು ಬೆಳಗಿನ ಜಾವ ನಿಧನರಾಗಿದ್ದಾರೆ. ಅವರಿಗೆ 66 ವರ್ಷ ವಯಸ್ಸಾಗಿತ್ತು. ಹೊನ್ನಾವರದ ಎಸ್.ಡಿ.ಎಂ. ಮಹಾವಿದ್ಯಾಲಯದಲ್ಲಿ ಸುದೀರ್ಘ 32 ವರ್ಷಗಳ ಕಾಲ, ಸಂಗೀತ ವಿಭಾಗದ ಅಧ್ಯಾಪಕ ಹಾಗೂ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದ ಪಂಡಿತ ಹುಗ್ಗಣ್ಣವರ, ಆಕಾಶವಾಣಿ ಹಾಗೂ ದೂರದರ್ಶನದ, ಬಿ ಹೈ ಶ್ರೇಣಿ ಗಾಯಕರು. ಚಂದ್ರಪ್ರಭಾ ಅಭಿನಂದನಾ ಗ್ರಂಥ ಸೇರಿದಂತೆ, ಅನೇಕ ಪುರಸ್ಕಾರಗಳಿಗೆ ಅವರು, ಭಾಜನರಾಗಿದ್ದಾರೆ.

<><><>

ಹುಬ್ಬಳ್ಳಿಯ ವಿದ್ಯಾನಗರದ ರುದ್ರಭೂಮಿಯಲ್ಲಿ, ನಾಳೆ ಬೆಳಗ್ಗೆ 11.30ರ ಬಳಿಕ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಜರುಗಲಿದೆ ಎಂದು, ನಿಕಟವರ್ತಿಗಳು ತಿಳಿಸಿದ್ದಾರೆ.

<><><>

ಆಕಾಶವಾಣಿಯ, ಬಹುಶ್ರುತ, ಮನ್ ಕಿ ಬಾತ್ ಕಾರ್ಯಕ್ರಮ, ಬರುವ 28 ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 129ನೇ ಆವೃತ್ತಿಯ ಮನದ ಮಾತಿಗೆ, ಸಾರ್ವಜನಿಕರಿಂದ ಅಭಿಪ್ರಾಯ ಕೋರಿದ್ದಾರೆ. 'ಮೋದಿ ಅಪ್ಲಿಕೇಶನ್ ಅಥವಾ 'ಮೈ ಗೌವ್' ಓಪನ್ ಫೋರಂ ಮೂಲಕ, ನಾಳೆ ರಾತ್ರಿಯ ವರೆಗೆ, ಜನತೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.